# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.59/2021

**DW**:2

**ದಿನಾಂಕ 02.06.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ಎಮ್.ಜೆ.ಐ. ವಕೀಲರಿಂದ:</u>**

ನನಗೆ ವಾದಿ ಮತ್ತು ಪ್ರತಿವಾದಿಯರ ಪೂರ್ವಜರಾದ ರಾಜೇಸಾಬ ಇವರು ಗೊತ್ತಿಲ್ಲ. ಸದರಿ ರಾಜೇಸಾಬ ಇವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು ಸಾಧೀಕ್ ಇವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ಸಾಧೀಕ್ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ.126 ಇರುತ್ತದೆ ಅದು ನಿಂಬಾಳದಲ್ಲಿ ಇರುತ್ತದೆ. ಈ ದಾವೆಯನ್ನು ನಮ್ಮ ವಿರುದ್ಧ ಯಾರು ಮತ್ತು ಯಾಕೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ.126 ಇದರ ಒಟ್ಟು ವಿಸ್ತೀರ್ಣ 45 ಎಕರೆ ಇತ್ತು.

ರಾಜೇಸಾಬ ಇವರಿಗೆ 9 ಜನ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಯನ್ನು ಬಂದಗೀಸಾಬ, ಇಮಾಮಸಾಬ, ರಜಾಕಸಾಬ ಮತ್ತು ಹುಸೇನಸಾಬ ಇವರು ಹೆಣ್ಣು ಮಕ್ಕಳಿಗೆ ಕೊಡದೇ ತಾವೇ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ರಾಜೇಸಾಬ ಇವರು ಮರಣ ಹೊಂದುವತನಕ ದಾವಾ ಆಸ್ತಿಯು ಅವರ ಹೆಸರಿನಲ್ಲಿ ಇದ್ದು ಅವರ ಮರಣಾನಂತರ ಹೆಣ್ಣು ಮಕ್ಕಳಿಗೆ ಪಾಲು ಕೊಡದೇ ಸದರಿ 4 ಜನರು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ರಾಜೇಸಾಬ ಇವರ ಮಗಳು ಇದ್ದು ಅವರಿಗೆ ದಾವಾ ಆಸ್ತಿಯಲ್ಲಿ 1/9 ನೇ ಭಾಗಾಂಶ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರಿಗೆ ಪಾಲು ಇರುತ್ತದೆ ಎಂದು ಗೊತ್ತಿಲ್ಲದೇ ನಾನು ಈ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಕಾಗದವನ್ನು ನೋಡಿ ಖರೀದಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರು ಸಹ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.